# ಸಂವಿಧಾನಾತ್ಮಕ ನೈತಿಕತೆ ಮತ್ತು ಸಾಮಾಜಿಕ ನ್ಯಾಯ: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೇಲಿನ ದೌರ್ಜನ್ಯ ನಿಯಂತ್ರಣದ ಸಮಾಜಶಾಸ್ತ್ರೀಯ ಆಯಾಮಗಳು

**ಚರಣ್ ಎಲ್. ಕಾಳೆ*** & **ಸುಭಾಸಚಂದ್ರ ಸಿ. ನಾಟೀಕಾರ****

**DOI: https://doi.org/10.5281/zenodo.19637954**

**ABSTRACT**

ಭಾರತೀಯ ಸಮಾಜವು ಬಹುಕಾಲದಿಂದ ಶ್ರೇಣೀಕೃತ ಅಸಮಾನತೆಯ ಆಧಾರದ ಮೇಲೆ ರಚನೆಯಾಗಿದ್ದು, ಇದು ತಳಸಮುದಾಯಗಳ ಶೋಷಣೆಗೆ ಸಾಂಸ್ಥಿಕ ರೂಪವನ್ನು ನೀಡಿದೆ. ಇಂತಹ ಶೋಷಣೆಗಳನ್ನು ತಡೆಗಟ್ಟಿ, ಪ್ರತಿಯೊಬ್ಬರಿಗೂ ಘನತೆಯ ಬದುಕನ್ನು ಖಾತರಿಪಡಿಸುವ ಉದ್ದೇಶದಿಂದ ಭಾರತದ ಸಂವಿಧಾನವು ಸಾಮಾಜಿಕ ನ್ಯಾಯದ ಪರಿಕಲ್ಪನೆಯನ್ನು ಬಲವಾಗಿ ಅಳವಡಿಸಿಕೊಂಡಿದೆ. ಆದರೂ, ಸ್ವತಂತ್ರ ಭಾರತದಲ್ಲಿ ದಶಕಗಳು ಕಳೆದರೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೇಲಿನ ದೌರ್ಜನ್ಯಗಳು ನಿರಂತರವಾಗಿ ನಡೆಯುತ್ತಿರುವುದು ಅತ್ಯಂತ ಆತಂಕಕಾರಿ ವಿಷಯವಾಗಿದೆ. ಕಾನೂನಾತ್ಮಕ ರಕ್ಷಣೆಗಳು ಮತ್ತು ಕಟ್ಟುನಿಟ್ಟಾದ ನಿಯಮಾವಳಿಗಳ ಹೊರತಾಗಿಯೂ, ದೌರ್ಜನ್ಯಗಳು ಮರುಕಳಿಸುತ್ತಿರುವುದರ ಹಿಂದಿನ ಸಮಾಜಶಾಸ್ತ್ರೀಯ ಕಾರಣಗಳನ್ನು ವಿಶ್ಲೇಷಿಸುವುದು ಪ್ರಸ್ತುತ ಸಂಶೋಧನಾ ಲೇಖನದ ಮುಖ್ಯ ಉದ್ದೇಶವಾಗಿದೆ. ಸಂವಿಧಾನಾತ್ಮಕ ನೈತಿಕತೆಯು ಕೇವಲ ಸರ್ಕಾರದ ಕಾರ್ಯಾಂಗ, ಶಾಸಕಾಂಗ ಮತ್ತು ನ್ಯಾಯಾಂಗ ವ್ಯವಸ್ಥೆಗಳಿಗೆ ಮಾತ್ರ ಸೀಮಿತವಾಗದೆ, ನಾಗರಿಕರ ದೈನಂದಿನ ಬದುಕಿನ ಅವಿಭಾಜ್ಯ ಅಂಗವಾಗಬೇಕಾದ ಅನಿವಾರ್ಯತೆಯನ್ನು ಈ ಅಧ್ಯಯನವು ಸಮಗ್ರವಾಗಿ ವಿವರಿಸುತ್ತದೆ. ಗ್ರಾಮೀಣ ಮತ್ತು ನಗರ ಪ್ರದೇಶಗಳೆರಡರಲ್ಲೂ ಕಂಡುಬರುವ ಜಾತಿ ಆಧಾರಿತ ತಾರತಮ್ಯಗಳು, ಆರ್ಥಿಕ ಹಾಗೂ ಸಾಮಾಜಿಕ ಅಧಿಕಾರದ ಅಸಮತೋಲನ, ಮತ್ತು ಸಾಮಾಜಿಕ ಬಹಿಷ್ಕಾರದಂತಹ ಅಮಾನವೀಯ ಘಟನೆಗಳು ನಮ್ಮ ಪ್ರಸ್ತುತ ಸಾಮಾಜಿಕ ಸನ್ನಿವೇಶದಲ್ಲಿ ಇನ್ನೂ ಜೀವಂತವಾಗಿವೆ. ನ್ಯಾಯಾಂಗ ಮತ್ತು ಪೊಲೀಸ್ ವ್ಯವಸ್ಥೆಗಳಲ್ಲಿ ಅಡಗಿರುವ ಜಾತಿಪೂರ್ವಗ್ರಹಗಳು ಕಾನೂನಿನ ಪರಿಣಾಮಕಾರಿ ಜಾರಿಗೆ ಹೇಗೆ ಪ್ರಬಲ ಅಡ್ಡಿಯಾಗುತ್ತಿವೆ ಎಂಬುದನ್ನು ಸಮಾಜಶಾಸ್ತ್ರೀಯ ನೆಲೆಯಲ್ಲಿ ವಿಮರ್ಶಿಸಲಾಗಿದೆ. ಜಾಗತೀಕರಣ ಮತ್ತು ಆಧುನೀಕರಣವು ತಂದಿರುವ ಬದಲಾವಣೆಗಳು ದಲಿತ ಮತ್ತು ಆದಿವಾಸಿ ಸಮುದಾಯಗಳ ಬದುಕಿನ ಮೇಲೆ ಬೀರಿದ ಪ್ರಭಾವ, ಹಾಗೂ ಈ ಆರ್ಥಿಕ ಬದಲಾವಣೆಗಳು ಸಮಾಜದಲ್ಲಿ

* **ಚರಣ್ ಎಲ್. ಕಾಳೆ,** ಸಂಶೋಧನಾ ವಿದ್ಯಾರ್ಥಿ, ಸಮಾಜಶಾಸ್ತ್ರ ಅಧ್ಯಯನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

** **ಡಾ. ಸುಭಾಸಚಂದ್ರ ಸಿ. ನಾಟೀಕಾರ,** ಮಾರ್ಗದರ್ಶಕರು ಮತ್ತು ಪ್ರಾಧ್ಯಾಪಕರು, ಸಮಾಜಶಾಸ್ತ್ರ ಅಧ್ಯಯನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಹೊಸ ಸ್ವರೂಪದ ಸಂಘರ್ಷ ಮತ್ತು ದೌರ್ಜನ್ಯಗಳಿಗೆ ಹೇಗೆ ಕಾರಣವಾಗಿವೆ ಎಂಬುದನ್ನೂ ಸಹ ಲೇಖನವು ಆಳವಾಗಿ ಚರ್ಚಿಸುತ್ತದೆ. ಒಟ್ಟಾರೆಯಾಗಿ, ಕೇವಲ ದಂಡನಾತ್ಮಕ ಕಾನೂನುಗಳಿಂದ ಸಮಾಜವನ್ನು ಬದಲಾಯಿಸಲು ಸಾಧ್ಯವಿಲ್ಲ; ಬದಲಾಗಿ ಸಾಂವಿಧಾನಿಕ ಮೌಲ್ಯಗಳನ್ನು ಜನರ ಆಂತರಿಕ ಸಾಮಾಜಿಕ ಮೌಲ್ಯಗಳನ್ನಾಗಿ ಪರಿವರ್ತಿಸುವ ಮೂಲಕ ಮಾತ್ರ ನೈಜ ಸಾಮಾಜಿಕ ನ್ಯಾಯವನ್ನು ಒದಗಿಸಲು ಮತ್ತು ದೌರ್ಜನ್ಯ ಮುಕ್ತ ಸಮಾಜವನ್ನು ನಿರ್ಮಿಸಲು ಸಾಧ್ಯ ಎಂಬ ದೃಢವಾದ ನಿರ್ಧಾರಕ್ಕೆ ಈ ಅಧ್ಯಯನವು ಬರುತ್ತದೆ. ಇದು ಸಂವಿಧಾನ, ಸಮಾಜಶಾಸ್ತ್ರ ಮತ್ತು ಸಾಮಾಜಿಕ ವಾಸ್ತವಗಳ ನಡುವಿನ ಸಂಕೀರ್ಣ ಸಂಬಂಧಗಳನ್ನು ಬಿಡಿಸಿಡುತ್ತದೆ.

**KEYWORDS:** ಸಂವಿಧಾನಾತ್ಮಕ ನೈತಿಕತೆ, ಸಾಮಾಜಿಕ ನ್ಯಾಯ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ದೌರ್ಜನ್ಯ ನಿಯಂತ್ರಣ, ಸಮಾಜಶಾಸ್ತ್ರೀಯ ಆಯಾಮ.

---

**ಪೀಠಿಕೆ:**

ಭಾರತವು ಭೌಗೋಳಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಅತ್ಯಂತ ವೈವಿಧ್ಯಮಯವಾದ ರಾಷ್ಟ್ರವಾಗಿದ್ದರೂ, ಇಲ್ಲಿನ ಸಾಮಾಜಿಕ ವ್ಯವಸ್ಥೆಯು ಶತಮಾನಗಳಿಂದಲೂ ಕಠಿಣವಾದ ಜಾತಿ ಪದ್ಧತಿಯ ಆಧಾರದ ಮೇಲೆ ರೂಪುಗೊಂಡಿದೆ. ಈ ಜಾತಿ ವ್ಯವಸ್ಥೆಯು ಕೇವಲ ಶ್ರಮದ ವಿಭಜನೆಯನ್ನಷ್ಟೇ ಮಾಡದೆ, ಶ್ರಮಿಕರ ವಿಭಜನೆಯನ್ನೂ ಮಾಡಿ ಸಮಾಜದಲ್ಲಿ ಅಸಮಾನತೆಯನ್ನು ಹುಟ್ಟುಹಾಕಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು ಈ ಅಸಮಾನತೆಯ ಅತ್ಯಂತ ಕ್ರೂರ ಬಲಿಪಶುಗಳಾಗಿದ್ದು, ಅವರನ್ನು ಶೈಕ್ಷಣಿಕ, ಆರ್ಥಿಕ ಮತ್ತು ಸಾಮಾಜಿಕ ಹಕ್ಕುಗಳಿಂದ ವಂಚಿತರನ್ನಾಗಿ ಮಾಡಲಾಗಿತ್ತು. ಸ್ವಾತಂತ್ರ್ಯಾನಂತರ, ಭಾರತವು ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ ಹೊರಹೊಮ್ಮಿದಾಗ, ಸಂವಿಧಾನ ಶಿಲ್ಪಿ ಡಾ. ಬಿ. ಆರ್. ಅಂಬೇಡ್ಕರ್ ಅವರ ದೂರದೃಷ್ಟಿಯ ಫಲವಾಗಿ ಸಂವಿಧಾನದಲ್ಲಿ ಸಾಮಾಜಿಕ ನ್ಯಾಯ ಮತ್ತು ಸಮಾನತೆಯ ಹಕ್ಕುಗಳಿಗೆ ಭದ್ರವಾದ ತಳಹದಿಯನ್ನು ಒದಗಿಸಲಾಯಿತು. ಸಂವಿಧಾನವು ಕೇವಲ ಆಡಳಿತಾತ್ಮಕ ಕರಡು ಪುಸ್ತಕವಲ್ಲ, ಬದಲಾಗಿ ಅದೊಂದು ಸಾಮಾಜಿಕ ಪರಿವರ್ತನೆಯ ಪ್ರಬಲ ಅಸ್ತ್ರವಾಗಿದೆ. ಸಂವಿಧಾನಾತ್ಮಕ ನೈತಿಕತೆ ಎಂಬುದು ಪ್ರತಿಯೊಬ್ಬ ವ್ಯಕ್ತಿಯ ಘನತೆಯನ್ನು ಎತ್ತಿಹಿಡಿಯುವ, ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವವನ್ನು ಪೋಷಿಸುವ ಉನ್ನತ ಮೌಲ್ಯವಾಗಿದೆ. ಆದರೆ, ಆಧುನಿಕ ಭಾರತದ ಸಾಮಾಜಿಕ ಸನ್ನಿವೇಶದಲ್ಲಿ ಈ ಸಂವಿಧಾನಾತ್ಮಕ ನೈತಿಕತೆಯು ಸಾಂಪ್ರದಾಯಿಕ ಸಾಮಾಜಿಕ ನೈತಿಕತೆಯೊಂದಿಗೆ ನಿರಂತರ ಸಂಘರ್ಷದಲ್ಲಿದೆ. ಸಾಂಪ್ರದಾಯಿಕ ನೈತಿಕತೆಯು ಜಾತಿ, ಮೇಲು-ಕೀಳು ಎಂಬ ತಾರತಮ್ಯಗಳನ್ನು ಧರ್ಮದ ಹೆಸರಿನಲ್ಲಿ ಸಮರ್ಥಿಸಿಕೊಂಡರೆ, ಸಂವಿಧಾನಾತ್ಮಕ ನೈತಿಕತೆಯು ಈ ಎಲ್ಲ ತಾರತಮ್ಯಗಳನ್ನು ತಿರಸ್ಕರಿಸಿ ಮಾನವತಾವಾದವನ್ನು ಪ್ರತಿಪಾದಿಸುತ್ತದೆ. ಈ ಹಿನ್ನೆಲೆಯಲ್ಲಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೇಲೆ ನಡೆಯುತ್ತಿರುವ ನಿರಂತರ ದೌರ್ಜನ್ಯಗಳನ್ನು ಕೇವಲ ಕಾನೂನು ಸುವ್ಯವಸ್ಥೆಯ ಸಮಸ್ಯೆಯಾಗಿ ನೋಡದೆ, ಅದನ್ನೊಂದು ಗಂಭೀರವಾದ ಸಮಾಜಶಾಸ್ತ್ರೀಯ ಬಿಕ್ಕಟ್ಟಾಗಿ ವಿಶ್ಲೇಷಿಸುವುದು ಅತ್ಯಾವಶ್ಯಕವಾಗಿದೆ. ಸಮಾಜದಲ್ಲಿ ಬೇರೂರಿರುವ ಹಿತಾಸಕ್ತಿಗಳು, ಭೂಮಿ ಮತ್ತು ಸಂಪನ್ಮೂಲಗಳ ಮೇಲಿನ ಹಿಡಿತ, ಮತ್ತು ದಲಿತ ಸಮುದಾಯಗಳು ತಮ್ಮ ಹಕ್ಕುಗಳಿಗಾಗಿ ನಡೆಸುತ್ತಿರುವ ಹೋರಾಟಗಳು ಹೇಗೆ ದೌರ್ಜನ್ಯದ ರೂಪದಲ್ಲಿ ಸ್ಫೋಟಗೊಳ್ಳುತ್ತಿವೆ ಎಂಬುದನ್ನು ಅಧ್ಯಯನ ಮಾಡುವುದು ಈ ಸಂಶೋಧನಾ ಲೇಖನದ ಪ್ರಮುಖ

ಆಶಯವಾಗಿದೆ.

**ಸಂವಿಧಾನಾತ್ಮಕ ನೈತಿಕತೆಯ ಸೈದ್ಧಾಂತಿಕತೆ:**

ಸಂವಿಧಾನಾತ್ಮಕ ನೈತಿಕತೆ ಎಂಬ ಪರಿಕಲ್ಪನೆಯು ಪ್ರಜಾಪ್ರಭುತ್ವದ ಯಶಸ್ಸಿಗೆ ಅತ್ಯಂತ ನಿರ್ಣಾಯಕವಾದ ಅಂಶವಾಗಿದೆ. ಡಾ. ಬಿ. ಆರ್. ಅಂಬೇಡ್ಕರ್ ಅವರು ಸಂವಿಧಾನ ರಚನಾ ಸಭೆಯಲ್ಲಿ ಭಾಷಣ ಮಾಡುತ್ತಾ, ಸಂವಿಧಾನಾತ್ಮಕ ನೈತಿಕತೆಯು ಭಾರತೀಯ ಸಮಾಜಕ್ಕೆ ಸಹಜವಾಗಿ ಬಂದಿರುವ ಗುಣವಲ್ಲ, ಅದನ್ನು ನಾವೆಲ್ಲರೂ ಕಷ್ಟಪಟ್ಟು ಬೆಳೆಸಿಕೊಳ್ಳಬೇಕಾಗಿದೆ ಎಂದು ಎಚ್ಚರಿಸಿದ್ದರು. ಭಾರತೀಯ ಸಮಾಜವು ಮೂಲಭೂತವಾಗಿ ಪ್ರಜಾಸತ್ತಾತ್ಮಕವಾಗಿಲ್ಲ, ಅದು ಮೇಲ್ಮೈಯಲ್ಲಿ ಮಾತ್ರ ಪ್ರಜಾಪ್ರಭುತ್ವದ ಲಕ್ಷಣಗಳನ್ನು ಹೊಂದಿದ್ದು, ಆಂತರಿಕವಾಗಿ ಜಾತಿ ಮತ್ತು ವರ್ಗಗಳ ತಾರತಮ್ಯದಿಂದ ಕೂಡಿದೆ ಎಂಬುದು ಅವರ ಸ್ಪಷ್ಟ ನಿಲುವಾಗಿತ್ತು. ಸಂವಿಧಾನಾತ್ಮಕ ನೈತಿಕತೆಯು ಕೇವಲ ಕಾನೂನುಗಳನ್ನು ಪಾಲಿಸುವುದಕ್ಕೆ ಸೀಮಿತವಾಗಿಲ್ಲ; ಅದು ಸಮಾಜದ ಕಟ್ಟಕಡೆಯ ವ್ಯಕ್ತಿಯ ಹಕ್ಕುಗಳನ್ನು ಗೌರವಿಸುವ, ಬಹುಮತದ ದಬ್ಬಾಳಿಕೆಯನ್ನು ತಡೆಯುವ ಮತ್ತು ಅಲ್ಪಸಂಖ್ಯಾತರು ಹಾಗೂ ಅಂಚಿಗೆ ತಳ್ಳಲ್ಪಟ್ಟವರ ಧ್ವನಿಗೆ ಮನ್ನಣೆ ನೀಡುವ ಒಂದು ವಿಶಾಲವಾದ ದೃಷ್ಟಿಕೋನವಾಗಿದೆ. ಸಾಮಾಜಿಕ ನ್ಯಾಯವು ಈ ನೈತಿಕತೆಯ ತಿರುಳಾಗಿದೆ. ಭಾರತೀಯ ಸಮಾಜದಲ್ಲಿ ಯುಗಯುಗಗಳಿಂದಲೂ ಧರ್ಮಶಾಸ್ತ್ರಗಳು ಮತ್ತು ಪುರಾಣಗಳು ರೂಪಿಸಿದ ಸಾಂಪ್ರದಾಯಿಕ ನೈತಿಕತೆಯೇ ಮೇಲುಗೈ ಸಾಧಿಸಿತ್ತು. ಈ ಸಾಂಪ್ರದಾಯಿಕ ವ್ಯವಸ್ಥೆಯು ಅಸ್ಪೃಶ್ಯತೆಯನ್ನು ಆಚರಿಸುವುದು, ದಲಿತರು ಮತ್ತು ಆದಿವಾಸಿಗಳನ್ನು ಅಮಾನವೀಯವಾಗಿ ನಡೆಸಿಕೊಳ್ಳುವುದು ಸಮಾಜದ ನಿಯಮವೆಂದು ನಂಬಿಸಿತ್ತು. ಆದರೆ ಸಂವಿಧಾನವು ಜಾರಿಗೆ ಬಂದ ನಂತರ, ಈ ಹಳೆಯ ಮೌಲ್ಯಗಳ ಜಾಗದಲ್ಲಿ ಹೊಸ ಮೌಲ್ಯಗಳನ್ನು ಬಿತ್ತಲಾಯಿತು. ಇಲ್ಲಿಯೇ ನೈಜ ಸಂಘರ್ಷ ಪ್ರಾರಂಭವಾಗುವುದು. ಸಂವಿಧಾನವು ಸಮಾನತೆಯನ್ನು ಸಾರುತ್ತದೆ, ಆದರೆ ಸಮಾಜವು ಅಸಮಾನತೆಯನ್ನು ಆಚರಿಸುತ್ತದೆ. ಈ ವಿರೋಧಾಭಾಸವು ದಲಿತರ ಮೇಲಿನ ದೌರ್ಜನ್ಯಗಳಿಗೆ ಮೂಲ ಕಾರಣವಾಗಿದೆ. ಯಾವಾಗ ಶೋಷಿತ ಸಮುದಾಯಗಳು ಸಂವಿಧಾನವು ತಮಗೆ ನೀಡಿದ ಹಕ್ಕುಗಳ ಬಗ್ಗೆ ಅರಿವು ಮೂಡಿಸಿಕೊಂಡು, ಸಮಾನತೆಗಾಗಿ ಆಗ್ರಹಿಸುತ್ತಾರೋ, ಆಗ ಪ್ರಬಲ ಜಾತಿಗಳು ತಮ್ಮ ಸಾಂಪ್ರದಾಯಿಕ ಅಧಿಕಾರವನ್ನು ಕಳೆದುಕೊಳ್ಳುವ ಭೀತಿಯಿಂದ ದೌರ್ಜನ್ಯದ ಮೊರೆ ಹೋಗುತ್ತಾರೆ. ಆದ್ದರಿಂದ, ದೌರ್ಜನ್ಯ ನಿಯಂತ್ರಣ ಕಾಯ್ದೆಗಳು ಎಷ್ಟೇ ಕಟ್ಟುನಿಟ್ಟಿನ ಜಾರಿಯಾದರೂ, ಸಮಾಜದ ಆಂತರಿಕ ಮನಸ್ಥಿತಿಯು ಸಂವಿಧಾನಾತ್ಮಕ ನೈತಿಕತೆಯನ್ನು ಒಪ್ಪಿಕೊಳ್ಳದ ಹೊರತು ನೈಜ ಬದಲಾವಣೆ ಅಸಾಧ್ಯ ಎಂಬುದನ್ನು ಸಮಾಜಶಾಸ್ತ್ರೀಯ ದೃಷ್ಟಿಕೋನವು ಸ್ಪಷ್ಟಪಡಿಸುತ್ತದೆ.

**ಭಾರತೀಯ ಸಮಾಜ ವ್ಯವಸ್ಥೆ:**

ಭಾರತೀಯ ಸಮಾಜದ ರಚನೆಯನ್ನು ಅರ್ಥಮಾಡಿಕೊಳ್ಳದೆ ದೌರ್ಜನ್ಯಗಳ ಸ್ವರೂಪವನ್ನು ಅರಿಯುವುದು ಅಸಾಧ್ಯ. ಭಾರತದ ಗ್ರಾಮೀಣ ಸನ್ನಿವೇಶದಲ್ಲಿ ಜಾತಿಯು ಕೇವಲ ಒಂದು ಸಾಮಾಜಿಕ ಗುರುತಾಗಿರದೆ, ಅದೊಂದು ಆರ್ಥಿಕ ಮತ್ತು ರಾಜಕೀಯ ಶಕ್ತಿಯ ಅಳತೆಗೋಲಾಗಿದೆ. ಭೂಮಿಯ ಮಾಲೀಕತ್ವ, ಸಂಪನ್ಮೂಲಗಳ ಹಂಚಿಕೆ ಮತ್ತು ಉತ್ಪಾದನಾ ಸಾಧನಗಳ ಮೇಲಿನ ನಿಯಂತ್ರಣವು ಬಹುಪಾಲು ಮೇಲ್ಜಾತಿ ಅಥವಾ ಪ್ರಬಲ ಜಾತಿಗಳ ಕೈಯಲ್ಲಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರು ಹೆಚ್ಚಾಗಿ ಭೂರಹಿತ ಕೃಷಿ ಕಾರ್ಮಿಕರಾಗಿ, ದಿನಗೂಲಿ ನೌಕರರಾಗಿ, ಅಸಂಘಟಿತ ವಲಯದ

ಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಈ ಆರ್ಥಿಕ ಅವಲಂಬನೆಯು ಅವರನ್ನು ನಿರಂತರ ಶೋಷಣೆಗೆ ಗುರಿಮಾಡಿದೆ. ಗ್ರಾಮಗಳ ಭೌಗೋಳಿಕ ರಚನೆಯೇ ಜಾತಿ ತಾರತಮ್ಯವನ್ನು ಬಿಂಬಿಸುವಂತಿದೆ; ದಲಿತರ ಕೇರಿಗಳು ಊರಿನಿಂದ ಹೊರಗಿರುತ್ತವೆ ಮತ್ತು ಮೂಲಭೂತ ಸೌಕರ್ಯಗಳಿಂದ ವಂಚಿತವಾಗಿರುತ್ತವೆ. ಈ ತಾರತಮ್ಯಪೂರಿತ ಸಾಮಾಜಿಕ ಸನ್ನಿವೇಶದಲ್ಲಿ ದಲಿತರು ತಮ್ಮ ಸ್ವಾಯತ್ತತೆಯನ್ನು ಸ್ಥಾಪಿಸಲು ಮುಂದಾದಾಗ ಸಹಜವಾಗಿಯೇ ಪ್ರಬಲ ವರ್ಗದಿಂದ ಪ್ರತಿರೋಧ ಎದುರಾಗುತ್ತದೆ. ಸಮಾಜಶಾಸ್ತ್ರೀಯವಾಗಿ ಹೇಳುವುದಾದರೆ, ದೌರ್ಜನ್ಯಗಳು ಕೇವಲ ದ್ವೇಷದ ಅಪರಾಧಗಳಲ್ಲ, ಅವು ಅಧಿಕಾರದ ಪ್ರದರ್ಶನದ ಸಾಧನಗಳಾಗಿವೆ. ಸಮಾಜದಲ್ಲಿನ ತಮ್ಮ ಯಜಮಾನಿಕೆಯನ್ನು ಉಳಿಸಿಕೊಳ್ಳಲು, ಅಧೀನ ಸಮುದಾಯಗಳನ್ನು ಸದಾ ಭಯದಲ್ಲಿಡುವ ತಂತ್ರವಾಗಿ ದೌರ್ಜನ್ಯವನ್ನು ಬಳಸಲಾಗುತ್ತದೆ. ಮೀಸಲಾತಿ, ಶಿಕ್ಷಣ, ಮತ್ತು ಉದ್ಯೋಗದ ಅವಕಾಶಗಳಿಂದಾಗಿ ದಲಿತ ಸಮುದಾಯದ ಒಂದು ವರ್ಗವು ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ಮುಂದೆ ಬರುತ್ತಿದೆ. ಈ ಬೆಳವಣಿಗೆಯು ಸಾಂಪ್ರದಾಯಿಕ ಮನಸ್ಥಿತಿಯ ಜನರಲ್ಲಿ ಅಸೂಯೆ ಮತ್ತು ಅಭದ್ರತೆಯನ್ನು ಸೃಷ್ಟಿಸಿದೆ. ದಲಿತ ಯುವಕರು ಉತ್ತಮ ಬಟ್ಟೆ ಧರಿಸುವುದು, ವಾಹನಗಳನ್ನು ಬಳಸುವುದು, ಮೀಸೆ ಬಿಡುವುದು, ಕುದುರೆ ಏರುವುದು ಅಥವಾ ಸಾರ್ವಜನಿಕ ಸ್ಥಳಗಳಲ್ಲಿ ಸಮಾನತೆಯಿಂದ ವರ್ತಿಸುವುದು ಪ್ರಬಲ ಜಾತಿಗಳ ಕಣ್ಣುಗಳನ್ನು ಕೆಂಪಾಗಿಸುವ ಘಟನೆಗಳಾಗಿ ಮಾರ್ಪಟ್ಟಿವೆ. ಇಂತಹ ಚಿಕ್ಕ ಚಿಕ್ಕ ಕಾರಣಗಳಿಗಾಗಿಯೂ ಮಾರಣಾಂತಿಕ ಹಲ್ಲೆಗಳು, ಸಾಮಾಜಿಕ ಬಹಿಷ್ಕಾರಗಳು ನಡೆಯುತ್ತಿರುವುದು ನಮ್ಮ ಸಮಾಜದ ಕರಾಳ ಮುಖವನ್ನು ಅನಾವರಣಗೊಳಿಸುತ್ತದೆ. ಇದು ಕೇವಲ ವೈಯಕ್ತಿಕ ದ್ವೇಷವಲ್ಲ, ಬದಲಾಗಿ ಇಡೀ ಒಂದು ಸಮುದಾಯದ ಆತ್ಮಸ್ಥೈರ್ಯವನ್ನು ಕುಗ್ಗಿಸುವ ವ್ಯವಸ್ಥಿತ ಪಿತೂರಿಯಾಗಿದೆ.

**ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಮೇಲಿನ ದೌರ್ಜನ್ಯಗಳ ಸ್ವರೂಪ ಮತ್ತು ಕಾರಣಗಳು:**

ದೌರ್ಜನ್ಯಗಳ ಸ್ವರೂಪವು ಕಾಲಕ್ರಮೇಣ ಬದಲಾಗುತ್ತಲೇ ಬಂದಿದೆ. ಹಿಂದೆ ದೈಹಿಕ ಹಲ್ಲೆ, ಕೊಲೆ, ಅತ್ಯಾಚಾರ, ಮತ್ತು ಅಸ್ಪೃಶ್ಯತೆಯ ಆಚರಣೆಗಳು ನೇರವಾದ ಮತ್ತು ಭೀಕರವಾದ ಸ್ವರೂಪವನ್ನು ಹೊಂದಿದ್ದವು. ಪ್ರಸ್ತುತ ದಿನಗಳಲ್ಲಿಯೂ ಇವುಗಳು ಮುಂದುವರಿದಿದ್ದರೂ, ದೌರ್ಜನ್ಯದ ರೂಪಗಳು ಇನ್ನಷ್ಟು ಸೂಕ್ಷ್ಮ ಮತ್ತು ಸಂಕೀರ್ಣವಾಗಿವೆ. ಶೈಕ್ಷಣಿಕ ಸಂಸ್ಥೆಗಳಲ್ಲಿ ನಡೆಯುವ ಜಾತಿ ನಿಂದನೆ, ಉದ್ಯೋಗ ಸ್ಥಳಗಳಲ್ಲಿನ ತಾರತಮ್ಯ, ದಲಿತ ವಿದ್ಯಾರ್ಥಿಗಳಿಗೆ ಅವಕಾಶಗಳನ್ನು ನಿರಾಕರಿಸುವುದು, ಬಾಡಿಗೆ ಮನೆಗಳನ್ನು ನೀಡದಿರುವುದು ಇವೆಲ್ಲವೂ ಆಧುನಿಕ ದೌರ್ಜನ್ಯದ ಮುಖಗಳಾಗಿವೆ. ರೋಹಿತ್ ವೇಮುಲಾ ಅವರಂತಹ ಪ್ರತಿಭಾವಂತ ವಿದ್ಯಾರ್ಥಿಗಳ ಆತ್ಮಹತ್ಯೆಗಳು ಕೇವಲ ವೈಯಕ್ತಿಕ ದುರಂತಗಳಲ್ಲ, ಅವು ಸಾಂಸ್ಥಿಕ ದೌರ್ಜನ್ಯದ ಘೋರ ಪರಿಣಾಮಗಳಾಗಿವೆ. ಆದಿವಾಸಿಗಳ ವಿಷಯಕ್ಕೆ ಬಂದರೆ, ದೌರ್ಜನ್ಯದ ಸ್ವರೂಪವು ಕೊಂಚ ಭಿನ್ನವಾಗಿರುತ್ತದೆ. ಅರಣ್ಯ ಸಂಪತ್ತಿನ ಲೂಟಿ, ಅಭಿವೃದ್ಧಿ ಯೋಜನೆಗಳ ಹೆಸರಿನಲ್ಲಿ ಅವರ ಮೂಲ ನೆಲೆಗಳಿಂದ ಅವರನ್ನು ಒಕ್ಕಲೆಬ್ಬಿಸುವುದು, ಮತ್ತು ಅವರ ಸಾಂಸ್ಕೃತಿಕ ಅಸ್ಮಿತೆಯನ್ನು ನಾಶಪಡಿಸುವುದು ಆದಿವಾಸಿಗಳ ಮೇಲಿನ ಅತಿ ದೊಡ್ಡ ದೌರ್ಜನ್ಯವಾಗಿದೆ. ಅರಣ್ಯ ಹಕ್ಕು ಕಾಯ್ದೆಯಂತಹ ಕಾನೂನುಗಳಿದ್ದರೂ, ಜಾಗತೀಕರಣ ಮತ್ತು ಖಾಸಗೀಕರಣದ ಭರಾಟೆಯಲ್ಲಿ ಆದಿವಾಸಿಗಳ ಹಕ್ಕುಗಳು ಬಲವಂತವಾಗಿ ಹತ್ತಿಕ್ಕಲ್ಪಡುತ್ತಿವೆ. ಸಮಾಜಶಾಸ್ತ್ರೀಯವಾಗಿ, ಈ ದೌರ್ಜನ್ಯಗಳಿಗೆ ಪ್ರಮುಖ ಕಾರಣ ಅಧಿಕಾರದ ಹಂಚಿಕೆಯಲ್ಲಿರುವ ಅಸಮತೋಲನ. ಪಿತೃಪ್ರಧಾನ ವ್ಯವಸ್ಥೆಯು ಜಾತಿ ವ್ಯವಸ್ಥೆಯೊಂದಿಗೆ ಬೆರೆತು, ದಲಿತ ಮತ್ತು ಆದಿವಾಸಿ ಮಹಿಳೆಯರ ಮೇಲಿನ ಲೈಂಗಿಕ

ದೌರ್ಜನ್ಯವನ್ನು ಒಂದು ಆಯುಧವನ್ನಾಗಿ ಬಳಸಲಾಗುತ್ತಿದೆ. ಮಹಿಳೆಯ ದೇಹವನ್ನು ಆಯಾ ಸಮುದಾಯದ ಗೌರವದ ಸಂಕೇತವೆಂದು ಪರಿಗಣಿಸುವ ಪುರುಷಪ್ರಧಾನ ಸಮಾಜದಲ್ಲಿ, ದಲಿತ ಸಮುದಾಯವನ್ನು ಅವಮಾನಿಸಲು ಮತ್ತು ಅವರನ್ನು ಹತೋಟಿಯಲ್ಲಿಡಲು ದಲಿತ ಮಹಿಳೆಯರ ಮೇಲಿನ ಅತ್ಯಾಚಾರಗಳನ್ನು ಯೋಜಿತವಾಗಿ ನಡೆಸಲಾಗುತ್ತದೆ. ಅಂತರ್ಜಾತೀಯ ವಿವಾಹಗಳು ಸಮಾಜದಲ್ಲಿ ಜಾತಿವ್ಯವಸ್ಥೆಯನ್ನು ಒಡೆಯುವ ಪ್ರಮುಖ ಅಸ್ತ್ರಗಳಾಗಿದ್ದರೂ, ಅಂತಹ ವಿವಾಹಗಳನ್ನು ವಿರೋಧಿಸಿ ನಡೆಯುವ ಮರ್ಯಾದಾ ಹತ್ಯೆಗಳು (ಆನರ್ ಕಿಲ್ಲಿಂಗ್) ದಿನೇ ದಿನೇ ಹೆಚ್ಚುತ್ತಿವೆ. ಇವೆಲ್ಲವೂ ನಮ್ಮ ಸಮಾಜವು ಸಂವಿಧಾನಾತ್ಮಕ ಮೌಲ್ಯಗಳಿಗಿಂತ ಹೆಚ್ಚಾಗಿ ಜಾತೀಯ ಮೌಲ್ಯಗಳನ್ನೇ ಉಸಿರಾಡುತ್ತಿದೆ ಎಂಬುದಕ್ಕೆ ನಿದರ್ಶನಗಳಾಗಿವೆ.

**ದೌರ್ಜನ್ಯ ತಡೆ ಕಾಯ್ದೆ ಮತ್ತು ಅದರ ಅನುಷ್ಠಾನದಲ್ಲಿನ ಸಮಾಜೋ ಧಾರ್ಮಿಕ ಅಡೆತಡೆಗಳು:**

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೇಲಿನ ದೌರ್ಜನ್ಯಗಳನ್ನು ತಡೆಗಟ್ಟುವ ಉದ್ದೇಶದಿಂದ ಭಾರತ ಸರ್ಕಾರವು 1989 ರಲ್ಲಿ ದೌರ್ಜನ್ಯ ತಡೆ ಕಾಯ್ದೆಯನ್ನು ಜಾರಿಗೆ ತಂದಿತು. ಈ ಕಾಯ್ದೆಯು ಅತ್ಯಂತ ಪ್ರಬಲವಾದ ದಂಡನಾತ್ಮಕ ನಿಬಂಧನೆಗಳನ್ನು ಹೊಂದಿದ್ದು, ಜಾತಿ ನಿಂದನೆ, ದೈಹಿಕ ಹಲ್ಲೆ, ಸಾಮಾಜಿಕ ಬಹಿಷ್ಕಾರ ಸೇರಿದಂತೆ ಹಲವು ಸ್ವರೂಪದ ಅಪರಾಧಗಳನ್ನು ಕಠಿಣವಾಗಿ ಶಿಕ್ಷಿಸುವ ಗುರಿಯನ್ನು ಹೊಂದಿದೆ. ಆದರೆ, ಈ ಕಾಯ್ದೆಯ ಅನುಷ್ಠಾನದ ಹಂತದಲ್ಲಿ ಎದುರಾಗುವ ಸಮಾಜಶಾಸ್ತ್ರೀಯ ಅಡೆತಡೆಗಳು ಲೆಕ್ಕವಿಲ್ಲದಷ್ಟಿವೆ. ಕಾನೂನು ಎಷ್ಟೇ ಪ್ರಬಲವಾಗಿದ್ದರೂ, ಅದನ್ನು ಜಾರಿಗೊಳಿಸುವ ವ್ಯವಸ್ಥೆಯು ಅದೇ ಜಾತಿಗ್ರಸ್ತ ಸಮಾಜದ ಭಾಗವೇ ಆಗಿರುತ್ತದೆ. ಪೋಲಿಸ್ ಠಾಣೆ, ಕಂದಾಯ ಇಲಾಖೆ, ಮತ್ತು ನ್ಯಾಯಾಂಗ ವ್ಯವಸ್ಥೆಗಳಲ್ಲಿ ಕಾರ್ಯನಿರ್ವಹಿಸುವ ಬಹುತೇಕ ಸಿಬ್ಬಂದಿಗಳು ತಾವು ಬೆಳೆದುಬಂದ ಸಾಮಾಜಿಕ ಸನ್ನಿವೇಶದ ಜಾತಿ ಪೂರ್ವಗ್ರಹಗಳಿಂದ ಮುಕ್ತರಾಗಿರುವುದಿಲ್ಲ. ದಲಿತರು ದೂರು ನೀಡಲು ಪೋಲಿಸ್ ಠಾಣೆಗೆ ಹೋದಾಗ ಅವರನ್ನು ಕಡೆಗಣಿಸುವುದು, ಪ್ರಭಾವಿ ಜಾತಿಗಳ ಪರವಾಗಿ ನಿಂತು ದೂರು ದಾಖಲಿಸಿಕೊಳ್ಳಲು ನಿರಾಕರಿಸುವುದು, ಅಥವಾ ಸುಳ್ಳು ಪ್ರಕರಣಗಳೆಂದು ವಜಾಗೊಳಿಸುವುದು ಸಾಮಾನ್ಯವಾಗಿ ಕಂಡುಬರುವ ವಿದ್ಯಮಾನಗಳಾಗಿವೆ. ದೌರ್ಜನ್ಯ ತಡೆ ಕಾಯ್ದೆಯಡಿ ದಾಖಲಾಗುವ ಪ್ರಕರಣಗಳಲ್ಲಿ ಶಿಕ್ಷೆಯ ಪ್ರಮಾಣ ತೀರಾ ಕಡಿಮೆಯಾಗಿರುವುದು ಈ ವ್ಯವಸ್ಥೆಯ ವೈಫಲ್ಯವನ್ನು ಎತ್ತಿತೋರಿಸುತ್ತದೆ. ನ್ಯಾಯಾಲಯಗಳಲ್ಲಿ ಸುದೀರ್ಘ ಕಾಲ ನಡೆಯುವ ವಿಚಾರಣೆಗಳು, ಹಣ ಮತ್ತು ತೋಳ್ಬಲದ ಪ್ರಭಾವದಿಂದ ಸಾಕ್ಷಿಗಳನ್ನು ಬೆದರಿಸುವುದು ಅಥವಾ ಖರೀದಿಸುವುದು, ಮತ್ತು ತನಿಖಾ ಹಂತದಲ್ಲಿನ ಉದ್ದೇಶಪೂರ್ವಕ ಲೋಪಗಳು ದಲಿತರಿಗೆ ನ್ಯಾಯ ದೊರಕದಂತೆ ಮಾಡುತ್ತವೆ. ಸಾಮಾಜಿಕ ಬಹಿಷ್ಕಾರದಂತಹ ಘಟನೆಗಳು ನಡೆದಾಗ, ಇಡೀ ಗ್ರಾಮವೇ ಒಂದಾಗಿ ದಲಿತರಿಗೆ ನೀರು, ದಿನಸಿ, ಮತ್ತು ಉದ್ಯೋಗವನ್ನು ನಿರಾಕರಿಸುತ್ತದೆ. ಇಂತಹ ಸಂದರ್ಭದಲ್ಲಿ ನೊಂದ ಕುಟುಂಬಗಳು ಅನಿವಾರ್ಯವಾಗಿ ರಾಜಿ ಮಾಡಿಕೊಳ್ಳಬೇಕಾದ ದುಸ್ಥಿತಿಗೆ ತಳ್ಳಲ್ಪಡುತ್ತವೆ. ರಾಜಕೀಯ ನಾಯಕರು ಸಹ ತಮ್ಮ ವೋಟ್ ಬ್ಯಾಂಕ್ ರಾಜಕಾರಣಕ್ಕಾಗಿ ಪ್ರಬಲ ಜಾತಿಗಳ ಬೆಂಬಲಕ್ಕೆ ನಿಲ್ಲುತ್ತಾರೆಯೇ ಹೊರತು, ನ್ಯಾಯದ ಪರವಾಗಿ ಧ್ವನಿ ಎತ್ತುವುದು ಅಪರೂಪ. ಈ ಎಲ್ಲಾ ಕಾರಣಗಳಿಂದಾಗಿ, ಕಾಯ್ದೆಯು ಕೇವಲ ಕಾಗದದ ಮೇಲಿನ ರಕ್ಷಣೆಯಾಗಿ ಉಳಿದು, ದೈನಂದಿನ ವಾಸ್ತವದಲ್ಲಿ ದಲಿತರು ನಿರಂತರ ಅಭದ್ರತೆಯಲ್ಲಿ ಬದುಕುವಂತಾಗಿದೆ. ಕಾಯ್ದೆಯ ದುರ್ಬಳಕೆಯಾಗುತ್ತಿದೆ ಎಂಬ ಆರೋಪಗಳನ್ನು ಮುಂದಿಟ್ಟುಕೊಂಡು ಈ ಕಾಯ್ದೆಯನ್ನು ದುರ್ಬಲಗೊಳಿಸುವ ನಿರಂತರ ಪ್ರಯತ್ನಗಳೂ ಸಮಾಜದಲ್ಲಿ ನಡೆಯುತ್ತಿರುವುದು ಜಾತಿವಾದಿ

ಶಕ್ತಿಗಳ ಪ್ರಭಾವವನ್ನು ಸೂಚಿಸುತ್ತದೆ.

**ಸಾಮಾಜಿಕ ನ್ಯಾಯದ ಸಾಧನೆಗಾಗಿ ಪರಿಹಾರೋಪಾಯಗಳು:**

ಸಂವಿಧಾನಾತ್ಮಕ ನೈತಿಕತೆಯನ್ನು ಸ್ಥಾಪಿಸಲು ಮತ್ತು ಸಾಮಾಜಿಕ ನ್ಯಾಯವನ್ನು ಸಾಧಿಸಲು ಕೇವಲ ಕಾನೂನುಗಳನ್ನಷ್ಟೇ ನೆಚ್ಚಿಕೊಳ್ಳುವುದು ಸೂಕ್ತವಲ್ಲ. ಸಮಾಜಶಾಸ್ತ್ರೀಯ ದೃಷ್ಟಿಕೋನದಿಂದ, ಸಮಾಜದ ರಚನೆ ಮತ್ತು ಮೌಲ್ಯಗಳಲ್ಲಿ ಆಮೂಲಾಗ್ರ ಬದಲಾವಣೆಯಾಗಬೇಕಾದ ಅವಶ್ಯಕತೆಯಿದೆ. ಮೊದಲನೆಯದಾಗಿ, ಶಿಕ್ಷಣವು ಕೇವಲ ಅಕ್ಷರಾಭ್ಯಾಸವಾಗದೆ, ಸಾಮಾಜಿಕ ಜಾಗೃತಿಯ ಮಾಧ್ಯಮವಾಗಬೇಕು. ಶಾಲಾ ಪಠ್ಯಕ್ರಮಗಳಲ್ಲಿ ಸಂವಿಧಾನದ ಮೌಲ್ಯಗಳು, ಮಾನವ ಹಕ್ಕುಗಳು, ಮತ್ತು ಸಮಾನತೆಯ ಪರಿಕಲ್ಪನೆಗಳನ್ನು ಕಡ್ಡಾಯವಾಗಿ ಬೋಧಿಸುವ ಮೂಲಕ ಮುಂದಿನ ಪೀಳಿಗೆಯನ್ನು ಜಾತಿಪೂರ್ವಗ್ರಹಗಳಿಂದ ಮುಕ್ತಗೊಳಿಸಬೇಕಾಗಿದೆ. ಎರಡನೆಯದಾಗಿ, ಆರ್ಥಿಕ ಸಬಲೀಕರಣವು ಅತ್ಯಂತ ಮುಖ್ಯವಾಗಿದೆ. ಕೇವಲ ಮೀಸಲಾತಿಯಿಂದ ಮಾತ್ರ ಸಮಗ್ರ ಅಭಿವೃದ್ಧಿ ಸಾಧ್ಯವಿಲ್ಲ; ದಲಿತ ಮತ್ತು ಆದಿವಾಸಿ ಸಮುದಾಯಗಳಿಗೆ ಭೂಹಂಚಿಕೆ, ಕೃಷಿ ಸಾಲ ಸೌಲಭ್ಯಗಳು, ಮತ್ತು ಸ್ವಯಂ ಉದ್ಯೋಗಕ್ಕೆ ಉತ್ತೇಜನ ನೀಡುವ ಮೂಲಕ ಅವರನ್ನು ಆರ್ಥಿಕವಾಗಿ ಸ್ವಾವಲಂಬಿಗಳನ್ನಾಗಿ ಮಾಡಬೇಕು. ಆರ್ಥಿಕ ಪರಾವಲಂಬನೆಯು ಕಡಿಮೆಯಾದಂತೆ, ಸಾಮಾಜಿಕ ಶೋಷಣೆಯ ಪ್ರಮಾಣವೂ ಕಡಿಮೆಯಾಗುತ್ತದೆ. ಮೂರನೆಯದಾಗಿ, ಅಂತರ್ಜಾತೀಯ ವಿವಾಹಗಳಿಗೆ ಸರ್ಕಾರ ಮತ್ತು ಸಮಾಜ ಎರಡರಿಂದಲೂ ಪ್ರಬಲ ಬೆಂಬಲ ಸಿಗಬೇಕು. ಜಾತಿಯ ಬೇರುಗಳನ್ನು ಕತ್ತರಿಸಲು ರಕ್ತಸಂಬಂಧಗಳ ಬೆರಕೆ ಅತ್ಯಂತ ಪರಿಣಾಮಕಾರಿ ಮಾರ್ಗವಾಗಿದೆ. ಜಾತಿಯ ಉಗಮ, ವಿಕಾಸ ವಿವಾಹ ಸಂಸ್ಥೆಯಲ್ಲಿದೆ. ಮರ್ಯಾದೆಗೇಡು ಹತ್ಯೆಯ ಕುರಿತು ಮೊನ್ನೆಯ ಸರಕಾರ ಕರಡನ್ನು ಮಂಡಿಸಿದೆ (ಅಂಬೇಡ್ಕರ ಇವನಾರವ ಇವನಾರವ ಎಂದಿನಿಸದಿರಯ್ಯ) ಡಾ. ಬಿ. ಆರ್. ಅಂಬೇಡ್ಕರ್ ಅವರು ಪ್ರತಿಪಾದಿಸಿದಂತೆ ಅಂತರ್ಜಾತೀಯ ವಿವಾಹಗಳೇ ಜಾತಿ ವಿನಾಶದ ನಿಜವಾದ ಹೆಜ್ಜೆಗಳಾಗಿವೆ. ನಾಲ್ಕನೆಯದಾಗಿ, ದೌರ್ಜನ್ಯ ತಡೆ ಕಾಯ್ದೆಯ ಅನುಷ್ಠಾನವನ್ನು ಇನ್ನಷ್ಟು ಬಿಗಿಗೊಳಿಸಲು ಪೋಲಿಸ್ ಮತ್ತು ನ್ಯಾಯಾಂಗ ವ್ಯವಸ್ಥೆಯ ಸಿಬ್ಬಂದಿಗಳಿಗೆ ಕಡ್ಡಾಯವಾಗಿ ಸಾಮಾಜಿಕ ಸೂಕ್ಷ್ಮತೆಯ ತರಬೇತಿಯನ್ನು ನೀಡಬೇಕು. ದೌರ್ಜನ್ಯದ ಪ್ರಕರಣಗಳನ್ನು ತ್ವರಿತವಾಗಿ ವಿಲೇವಾರಿ ಮಾಡಲು ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸಿ, ನಿಗದಿತ ಕಾಲಮಿತಿಯೊಳಗೆ ನ್ಯಾಯದಾನ ಮಾಡುವ ವ್ಯವಸ್ಥೆ ರೂಪುಗೊಳ್ಳಬೇಕು. ಜೊತೆಗೆ, ದಲಿತ ಸಂಘಟನೆಗಳು, ಪ್ರಗತಿಪರ ಚಳುವಳಿಗಳು, ಮತ್ತು ನಾಗರಿಕ ಸಮಾಜವು ಒಗ್ಗೂಡಿ ಜಾತೀಯತೆಯ ವಿರುದ್ಧ ನಿರಂತರ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ರಾಜಕೀಯ ಇಚ್ಛಾಶಕ್ತಿಯು ಈ ಎಲ್ಲಾ ಬದಲಾವಣೆಗಳ ಕೇಂದ್ರಬಿಂದುವಾಗಿದೆ. ರಾಜಕೀಯ ಪಕ್ಷಗಳು ಜಾತಿ ರಾಜಕಾರಣವನ್ನು ಬದಿಗಿಟ್ಟು, ಸಂವಿಧಾನದ ಆಶಯಗಳನ್ನು ಪ್ರಾಮಾಣಿಕವಾಗಿ ಜಾರಿಗೊಳಿಸಲು ಮುಂದಾಗಬೇಕು. ಸಾಂಸ್ಕೃತಿಕ ಮಟ್ಟದಲ್ಲಿಯೂ ಬದಲಾವಣೆಗಳು ಆಗಬೇಕಿದ್ದು, ದಲಿತ ಮತ್ತು ಆದಿವಾಸಿಗಳ ಸಾಹಿತ್ಯ, ಕಲೆ, ಮತ್ತು ಸಂಸ್ಕೃತಿಗೆ ಮುಖ್ಯವಾಹಿನಿಯಲ್ಲಿ ಸೂಕ್ತ ಮನ್ನಣೆ ದೊರೆಯಬೇಕು.

**ಉಪಸಂಹಾರ:**

ಸಂವಿಧಾನಾತ್ಮಕ ನೈತಿಕತೆ ಮತ್ತು ಸಾಮಾಜಿಕ ನ್ಯಾಯಗಳು ಬೇರೆ ಬೇರೆಯಲ್ಲ, ಅವು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಭಾರತೀಯ ಸಮಾಜವು ಜಾಗತಿಕ ಮಟ್ಟದಲ್ಲಿ

ಆರ್ಥಿಕವಾಗಿ ಮತ್ತು ತಾಂತ್ರಿಕವಾಗಿ ಎಷ್ಟೇ ಮುಂದುವರಿದಿದ್ದರೂ, ಜಾತಿ ವ್ಯವಸ್ಥೆ ಮತ್ತು ತಳಸಮುದಾಯಗಳ ಮೇಲಿನ ದೌರ್ಜನ್ಯಗಳು ನಮ್ಮ ಅಭಿವೃದ್ಧಿಯ ಹಿಂದಿರುವ ಕರಾಳ ವಾಸ್ತವಗಳಾಗಿವೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೇಲಿನ ದೌರ್ಜನ್ಯಗಳನ್ನು ಕೇವಲ ಕಾನೂನಿನ ಉಲ್ಲಂಘನೆ ಎಂದು ಪರಿಗಣಿಸದೆ, ಅದೊಂದು ಸಾಮಾಜಿಕ ಮತ್ತು ಸಾಂಸ್ಕೃತಿಕ ದೌರ್ಬಲ್ಯವೆಂದು ಅರ್ಥಮಾಡಿಕೊಳ್ಳಬೇಕು. ಸಂವಿಧಾನವು ಸಮಾನತೆ ಮತ್ತು ಘನತೆಯ ಬದುಕಿನ ಭರವಸೆಯನ್ನು ನೀಡಿದೆ, ಆದರೆ ಆ ಭರವಸೆಯನ್ನು ನಿಜವಾದ ಅರ್ಥದಲ್ಲಿ ಸಾಕಾರಗೊಳಿಸುವ ಜವಾಬ್ದಾರಿ ಇಡೀ ಸಮಾಜದ ಮೇಲಿದೆ. ಡಾ. ಬಿ. ಆರ್. ಅಂಬೇಡ್ಕರ್ ಅವರ ಕನಸಿನಂತೆ, ನಾವು ಕೇವಲ ರಾಜಕೀಯ ಪ್ರಜಾಪ್ರಭುತ್ವವನ್ನು ಸಾಧಿಸಿದರೆ ಸಾಲದು, ಅದಕ್ಕೆ ಸಾಮಾಜಿಕ ಮತ್ತು ಆರ್ಥಿಕ ಪ್ರಜಾಪ್ರಭುತ್ವದ ತಳಹದಿಯೂ ಇರಬೇಕು. ಸಾಮಾಜಿಕ ಸನ್ನಿವೇಶದಲ್ಲಿ ಸಂವಿಧಾನದ ಮೌಲ್ಯಗಳು ಆಳವಾಗಿ ಬೇರೂರಿದಾಗ ಮಾತ್ರ ಕಾನೂನುಗಳು ತಮ್ಮ ನೈಜ ಶಕ್ತಿಯನ್ನು ಪ್ರದರ್ಶಿಸಲು ಸಾಧ್ಯ. ನ್ಯಾಯಾಂಗ, ಕಾರ್ಯಾಂಗ ಮತ್ತು ಶಾಸಕಾಂಗಗಳು ಜಾತಿ ಮುಕ್ತ ಮನಸ್ಥಿತಿಯಿಂದ ಕಾರ್ಯನಿರ್ವಹಿಸಬೇಕು. ಪ್ರಬಲ ಜಾತಿಗಳು ತಮ್ಮ ಶ್ರೇಷ್ಠತೆಯ ವ್ಯಸನದಿಂದ ಹೊರಬಂದು, ಸಹಮಾನವರನ್ನು ಗೌರವಿಸುವ ಮನೋಭಾವವನ್ನು ಬೆಳೆಸಿಕೊಳ್ಳಬೇಕು. ದಲಿತ ಮತ್ತು ಆದಿವಾಸಿ ಸಮುದಾಯಗಳು ತಮ್ಮ ಹಕ್ಕುಗಳಿಗಾಗಿ ನಡೆಸುತ್ತಿರುವ ಹೋರಾಟಗಳು ಕೇವಲ ಅವರ ಅಸ್ತಿತ್ವದ ಹೋರಾಟಗಳಲ್ಲ, ಅವು ಭಾರತದ ಪ್ರಜಾಸತ್ತಾತ್ಮಕ ಮತ್ತು ಸಾಂವಿಧಾನಿಕ ಮೌಲ್ಯಗಳನ್ನು ಉಳಿಸುವ ಹೋರಾಟಗಳಾಗಿವೆ. ಅಂತಿಮವಾಗಿ, ಸಾಮಾಜಿಕ ನ್ಯಾಯದ ಹಾದಿಯು ಕಠಿಣವಾದರೂ, ಸಂವಿಧಾನಾತ್ಮಕ ನೈತಿಕತೆಯ ಬೆಳಕಿನಲ್ಲಿ ಪ್ರತಿಯೊಬ್ಬ ನಾಗರಿಕನೂ ತನ್ನ ಜವಾಬ್ದಾರಿಯನ್ನು ಅರಿತು ಹೆಜ್ಜೆ ಹಾಕಿದರೆ, ಅಸಮಾನತೆ ಮತ್ತು ದೌರ್ಜನ್ಯ ಮುಕ್ತವಾದ, ನೈಜ ಭ್ರಾತೃತ್ವವನ್ನು ಹೊಂದಿದ ಸುಂದರ ಸಮಾಜವನ್ನು ನಿರ್ಮಿಸಲು ಖಂಡಿತವಾಗಿಯೂ ಸಾಧ್ಯವಿದೆ ಎಂಬುದನ್ನು ಸಮಾಜಶಾಸ್ತ್ರೀಯ ವಿಶ್ಲೇಷಣೆಯು ನಿಸ್ಸಂದಿಗ್ಧವಾಗಿ ಸಾಬೀತುಪಡಿಸುತ್ತದೆ. ವ್ಯವಸ್ಥೆಯ ಬದಲಾವಣೆಯ ಜೊತೆಗೆ ವ್ಯಕ್ತಿಯ ಆಂತರಿಕ ಬದಲಾವಣೆಯೂ ಸಮಾನಾಂತರವಾಗಿ ನಡೆದಾಗ ಮಾತ್ರ ಸಂವಿಧಾನದ ಆಶಯಗಳು ಸಂಪೂರ್ಣವಾಗಿ ಈಡೇರುತ್ತವೆ.

## ಪರಾಮರ್ಶನ ಗ್ರಂಥಗಳು:


1. Ambedkar, B. R. (2014). Annihilation of Caste: The Annotated Critical Edition (S. Anand, Ed.). Verso Books.
2. Baxi, U. (2010). The Future of Human Rights (3rd ed.). Oxford University Press.
3. Ghurye, G. S. (1969). Caste and Race in India (5th ed.). Popular Prakashan.
4. Guru, G. (Ed.). (2009). Humiliation: Claims and Context. Oxford University Press.
5. Ilaiah, K. (1996). Why I Am Not a Hindu: A Sudra Critique of Hindutva Philosophy, Culture and Political Economy.
6. Samya.
7. Jodhka, S. S. (2015). Caste in Contemporary India. Routledge.
8. Kannabiran, K. (2012). Tools of Justice: Non–discrimination and the Indian Constitution. Routledge.
9. Mendelsohn, O., & Vicziany, M. (1998). The Untouchables: Subordination, Poverty and the State in Modern India. Cambridge University Press.
10. Omvedt, G. (1994). Dalits and the Democratic Revolution: Dr Ambedkar and the Dalit Movement in Colonial India. Sage Publications.
11. Ram, N. (2008). Dalits in Contemporary India: Discrimination and Discontent. Siddhant Publications.
12. Rao, A. (2009). The Caste Question: Dalits and the Politics of Modern India. University of California Press.
13. Shah, G., Mander, H., Thorat, S., Deshpande, S., & Baviskar, A. (2006). Untouchability in Rural India. Sage Publications.
14. Teltumbde, A. (2010). The Persistence of Caste: The Khairlanji Murders and India's Hidden Apartheid. Zed Books.
15. Thorat, S. (2009). Dalits in India: Search for a Common Destiny. Sage Publications.
16. Zelliot, E. (1992). From Untouchable to Dalit: Essays on the Ambedkar Movement. Manohar Publications.